# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 528(672) |
| ಮಾನ್ಯ ಸದಸ್ಯರ ಹೆಸರು | ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22/07/2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತುರ್ತು ಅಗತ್ಯ ಔಷಧಿಗಳು ಲಭ್ಯವಿಲ್ಲದೆ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಔಷಧಿಗಳ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: | ಕರ್ನಾಟಕ ರಾಜ್ಯದ ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಅವಶ್ಯವಿರುವ ಹಾಗೂ State Therapeutic Committee ಯಲ್ಲಿ ನಿರ್ಧರಿಸಿ ಅನುಮೋದಿಸಿದ ಔಷಧಿಗಳ ವಾರ್ಷಿಕ ಬೇಡಿಕೆ ಪಟ್ಟಿಯನ್ನು e-AUSHADA ತಂತ್ರಾಂಶದ ಮುಖಾಂತರ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಸಂಸ್ಥೆಗೆ ಸಲ್ಲಿಸಲಾಗುತ್ತಿದೆ. ಅಗತ್ಯ ಔಷಧಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ KSMSCL ಸಂಸ್ಥೆಯಿಂದ ಟೆಂಡರ್ ಮುಖಾಂತರ ಸಂಗ್ರಹಿಸಿ ಜಿಲ್ಲಾವಾರು KSMSCL ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗುತ್ತಿದೆ. ಜಿಲ್ಲಾ KSMSCL ಔಷಧ ಉಗ್ರಾಣಗಳಿಂದ ಆರೋಗ್ಯ ಸಂಸ್ಥೆವಾರು ಬೇಡಿಕೆಯನ್ವಯ ಕೊರತೆಯಾಗದಂತೆ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ.<br><br>KSMSCL ಸಂಸ್ಥೆಯ ಜಿಲ್ಲಾ ಔಷಧ ಉಗ್ರಾಣಗಳಲ್ಲಿ ಲಭ್ಯವಿರುವ ಔಷಧಿಗಳ ಪಟ್ಟಿಯನ್ನು ಎಲ್ಲಾ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ತಮಗೆ ಅವಶ್ಯವಿರುವ ಔಷಧಿಗಳನ್ನು ಜಿಲ್ಲಾವಾರು KSMSCL ಔಷಧ ಉಗ್ರಾಣಗಳಿಗೆ ಬೇಡಿಕೆ ಸಲ್ಲಿಸಿ ಪಡೆಯಲಾಗುತ್ತಿದೆ.<br><br>2023-24 ನೇ ಸಾಲಿಗೆ ವಿವಿಧ ಹಂತದ ಆರೋಗ್ಯ ಸಂಸ್ಥೆಗಳ ಬೇಡಿಕೆಯ 732 ಔಷಧಿಗಳನ್ನು ಸರಬರಾಜು ಮಾಡಲು ಟೆಂಡರ್ ಗಳನ್ನು ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ ಆಹ್ವಾನಿಸಲಾಗಿರುತ್ತದೆ ಹಾಗೂ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ ಈಗಾಗಲೇ 458 ಔಷಧಗಳ ಸರಬರಾಜಿಗಾಗಿ ಖರೀದಿ ಆದೇಶ ನೀಡಲಾಗಿದ್ದು, 08 ಔಷಧಗಳ ಸರಬರಾಜಿಗಾಗಿ Notification of Award ಗಳನ್ನು ನೀಡಲಾಗಿರುತ್ತದೆ.<br><br>ಉಳಿದ ಔಷಧಗಳಿಗೆ ಎರಡು ಬಾರಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಔಷಧಿಗಳಿಗೆ ಶೂನ್ಯ ಬಿಡ್ಡುದಾರರಿದ್ದು, ಅನರ್ಹ ಬಿಡ್ ಆಗಿರುತ್ತದೆ. ಆದ್ದರಿಂದ ಮರು ಟೆಂಡರ್ ಆಹ್ವಾನಿಸಿ ಸರಬರಾಜು ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಖರೀದಿ ಆದೇಶ ನೀಡಲಾಗಿರುವ 458 ಮತ್ತು NOA ನೀಡಲಾಗಿರುವ 8 ಔಷಧಗಳ ಮಾಹಿತಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿರುವ 266 ಔಷಧಗಳ ಮಾಹಿತಿಯನ್ನು KSMSCL ಹಾಗೂ Health & Family Welfare ನ ಜಾಲತಾಣದಲ್ಲಿ ಲಭ್ಯವಿರುತ್ತದೆ. ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳದ ಔಷಧಗಳನ್ನು ಸೂಕ್ತ ಪ್ರಾಧಿಕಾರದ ಅನುಮೋದನೆ ಯೊಂದಿಗೆ ಸ್ಥಳೀಯವಾಗಿ ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಲಭ್ಯವಿರುವ ಅನುದಾನ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ABARK) ಅನುದಾನ, ಆರೋಗ್ಯ ರಕ್ಷ ಸಮಿತಿ (ARS) ಹಾಗೂ ಇತರೆ ಅನುದಾನದಲ್ಲಿ ನಿಯಮಾನುಸಾರ ಸ್ಥಳೀಯವಾಗಿ ಖರೀದಿಸಿ ಫಲಾನುಭವಿಗಳಿಗೆ ನೀಡುವಂತೆ ಸೂಚಿಸಲಾಗಿರುತ್ತದೆ . |

<table>
<tr>
<td></td>
<td></td>
<td>
2020-21, 2021-22, 2022-23 ಮತ್ತು 2023-24 ರ ಸಾಲಿನಲ್ಲಿ ಖರೀದಿಸಿರುವ ಔಷಧಗಳ ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><th colspan="2">Year Wise Procurement of Drugs ( Includes Annual Indent & Program Drugs)</th></tr>
<tr><th>Year</th><th>No of Drugs</th></tr>
<tr><td>2020-21</td><td>144</td></tr>
<tr><td>2021-22</td><td>195</td></tr>
<tr><td>2022-23</td><td>318</td></tr>
<tr><td>2023-24</td><td></td></tr>
<tr><td>Annual Indent- NOA/ PO</td><td>466</td></tr>
<tr><td>Program Drugs – NOA/PO</td><td>146</td></tr>
<tr><td>Total</td><td>612</td></tr>
</table>
State Therapeutic Committee ಯಲ್ಲಿ ನಿರ್ಧರಿಸಿ ಅನುಮೋದಿಸಿದ ವಾರ್ಷಿಕ ಬೇಡಿಕೆಯ ಔಷಧಗಳಲ್ಲಿ 233 ಅತೀ ಅವಶ್ಯಕವಿರುವ ಔಷಧಗಳಿದ್ದು ಅದರಲ್ಲಿ 193 ಔಷಧಗಳಿಗೆ ಸರಬರಾಜು ಆದೇಶ ನೀಡಲಾಗಿರುತ್ತದೆ. ಸದರಿ 193 ಔಷಧಗಳು ಸರಬರಾಜು ಆಗಿದ್ದು ಜಿಲ್ಲಾ ಉಗ್ರಾಣಗಳ ಹಂತದಲ್ಲಿ ದಾಸ್ತಾನು ಲಭ್ಯವಿರುತ್ತದೆ. ಆರೋಗ್ಯ ಸಂಸ್ಥೆಗಳಿಗೆ ಸರಬರಾಜು ಮಾಡಲಾಗುತ್ತಿದೆ.
</td>
</tr>
<tr>
<td>(ಆ)</td>
<td>ರಾಜ್ಯದಲ್ಲಿ ಪ್ರಾಥಮಿಕ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ತುರ್ತು ಅಗತ್ಯ ಔಷಧಿಗಳು ಲಭ್ಯವಿಲ್ಲದೆ ರೋಗಿಗಳು ಖಾಸಗಿ ಔಷಧಿ ಅಂಗಡಿಗಳಿಂದ ಔಷಧಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:</td>
<td>ಬಂದಿದೆ.<br>ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಔಷಧಿಗಳನ್ನು ಆಸ್ಪತ್ರೆಯಲ್ಲಿ ಲಭ್ಯವಿರುವ ABRK, ARS ಅನುದಾನದಿಂದ (ನಿಧಿ) ಖರೀದಿಸಲು ಆಯಾ ಆಡಳಿತ ವೈದ್ಯಾಧಿಕಾರಿಗಳಿಗೆ ಸುತ್ತೋಲೆ ಮುಖಾಂತರ ಸೂಚನೆ ನೀಡಲಾಗಿದೆ.</td>
</tr>
<tr>
<td>(ಇ)</td>
<td>ಆರೋಗ್ಯ ಕೇಂದ್ರಗಳಿಗೆ ಅಗತ್ಯವಿರುವ ಔಷಧಿಗಳನ್ನು ಪೂರೈಕೆ ಮಾಡದಿರಲು ಕಾರಣವೇನು: ಯಾವ ಕಾಲಮಿತಿಯೊಳಗೆ ಔಷಧಿಗಳನ್ನು ಪೂರೈಕೆ ಮಾಡುವುದು? (ವಿವರ ನೀಡುವುದು)</td>
<td>2023-24 ನೇ ಸಾಲಿನ ವಿವಿಧ ಹಂತದ ಆರೋಗ್ಯ ಸಂಸ್ಥೆಗಳ ಬೇಡಿಕೆಯ 732 ಔಷಧಿಗಳನ್ನು ಸರಬರಾಜು ಮಾಡಲು ಟೆಂಡರ್ ಗಳನ್ನು ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ ಆಹ್ವಾನಿಸಿ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ ಈಗಾಗಲೇ 458 ಔಷಧಗಳ ಸರಬರಾಜಿಗಾಗಿ ಖರೀದಿ ಆದೇಶ ನೀಡಲಾಗಿದ್ದು, 08 ಔಷಧಗಳ ಸರಬರಾಜಿಗಾಗಿ Notification of Award ಗಳನ್ನು ನೀಡಲಾಗಿರುತ್ತದೆ.<br><br>ಉಳಿದ 266 ಔಷಧಿಗಳಿಗೆ ಶೂನ್ಯ ಬಿಡ್ ಅಥವಾ ಸಲ್ಲಿಕೆಯಾದ ಬಿಡ್ ಗಳು ತಾಂತ್ರಿಕ/ಆರ್ಥಿಕ ಬಿಡ್ ಮೌಲ್ಯಮಾಪನದಲ್ಲಿ ಸಫಲವಾಗದ ಕಾರಣ ಮರು ಟೆಂಡರ್ ಮಾಡಲಾಗಿರುತ್ತದೆ. ಸದರಿ ಔಷಧಗಳ ಟೆಂಡರ್ ನಿಯಮಾವಳಿಯಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ನಿಗದಿತ ಸಮಯದಲ್ಲಿ ಔಷಧಿ ಸರಬರಾಜು ಮಾಡಲಾಗುವುದು.</td>
</tr>
</table>

ಸಂಖ್ಯೆ:HFW 39 STQ 2024

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು